ಆಗ, ಅರೆಗಣ್ಣಲ್ಲಿ ಧ್ಯಾನಿಸುತ್ತ ನೋಡುತ್ತಲೇ ಇರಬೇಕಿತ್ತು ನಾವು
ದಿಟ್ಟಿಸಿ ಮುಳುಗುವ ಸೂರ್ಯನನ್ನೇ.

ಅದೆಷ್ಟು ಸುಂದರ, ಎಷ್ಟು ಕಠಿಣಸೂರ್ಯನೊಡನೆ ಆ ದಿಟ್ಟಿಯುದ್ಧ!
ಸೃಷ್ಟಿಯ ಬಣ್ಣಗಳೆಲ್ಲ ಆಗಸದಲ್ಲಿ ಮೇಳೈಸುವ ತಾಣ ಅದು,
ದಿನದ ಶಬ್ದವೆಲ್ಲ ಒಂದೆಡೆ ಕೂಡುವ ಹೊತ್ತು,
ಅದು ನಿಜದಲ್ಲಿ, ನೀನು ಕಲಿಸಿದ ಪಾಠಗಳ
ಸೂರ್ಯ ಮೋಡದೊಳಗೆ ಕರಗುವಂತೆ
ನಮ್ಮೊಳಗೆ ಕರಗಿಸುವ ಆಟವಾಗಿತ್ತು ಅದು.

★★★

ಒಂದು ದಿನ ಬೆಳಿಗ್ಗೆ ಚರ್ಚಿಲ್ ನಿತ್ಯಕರ್ಮದ ಕೆಲಸಕ್ಕೆ ಹೋದವನು ತುಂಬ ಹೊತ್ತಾದರೂ ಮನೆಗೆ ಹಿಂತಿರುಗಲೇ ಇಲ್ಲ. ಸಂಜೆಯಾದರೂ ಅವನ ಪತ್ತೆಯಿಲ್ಲ. ಆ ಹಿಂದೆಯೂ ಒಮ್ಮೆ ಹೀಗೇ ಮಾಡಿ ಎರಡು ದಿನ ಬಿಟ್ಟು ಮನೆಯ ಹಿಂಬಾಗಿಲಲ್ಲಿ ಬಂದು ಅಮ್ಮನ ಭಯಕ್ಕೆ ಹೆದರಿಕೊಂಡು ಕುಳಿತಿದ್ದ. ಮೈಯೆಲ್ಲ ಸಿಂಡುವಾಸನೆ; ಚರಂಡಿಯ ಗಲೀಜು ಮೆತ್ತಿ ನಿಂತಿತ್ತು. ಅವನನ್ನು ತೊಳೆದು ಮಡಿ ಮಾಡಿ ಮೈಗೆಲ್ಲ ಪೌಡರ್ ಹಾಕಿ ಘಮಘಮ ಮಾಡಿದ್ದು ದೊಡ್ಡ ಸಾಹಸವೇ ಆಗಿತ್ತು. ಈ ಸರ್ತಿ ಅವನು ಒಂದು ದಿನ ನಾಪತ್ತೆಯಾಗಿ ಮರುದಿನ ವಾಪಸಾದಾಗ ಮನೆಯಲ್ಲಿ ಅಣ್ಣ, ಅಮ್ಮ ಯಾರೂ ಇರಲಿಲ್ಲ. ಯಥಾಪ್ರಕಾರ ಗಲೀಜು ಮೆತ್ತಿಕೊಂಡಿದ್ದ ಅವನನ್ನು ನಾನು ಮತ್ತು ತಮ್ಮ ಬಟ್ಟೆ ಸೋಪಿನಲ್ಲಿ ಸ್ನಾನ ಮಾಡಿಸಿದೆವು. ಸಿಂಡು ಹೋಗಿಸಲು ಮೈಸೋಪು, ಶಾಂಪೂ ಹಾಕಿದೆವು. ಆದರೂ ಅವನು ತನ್ನ ಶುಭ್ರಬಿಳಿ ಮಡಿಗೆ ಬರಲಿಲ್ಲ ಅಂತ ಇಬ್ಬರಿಗೂ ಬಲವಾಗಿ ಅನ್ನಿಸಿ, ಏನು ಮಾಡೋದು ಎಂದು ಯೋಚಿಸಿದೆವು. ನನಗೊಂದು ಯೋಚನೆ ಹೊಳೆಯಿತು. ಒಗೆದ ಬಿಳಿಬಟ್ಟೆಗಳಿಗೆ ಅಮ್ಮ ಉಜಾಲ ನೀಲಿ ಹಾಕುವುದನ್ನ ನಾನು ನೋಡಿದ್ದೆ. ಚರ್ಚಿಲ್‌ನ ಈಗಿರುವ ಬಿಳಿಬಣ್ಣವು ಅಮ್ಮ ಹಾಕಿ ಜಾಲಾಡುವ ನೀಲಿ ಹಾಕಿದರೆ ಇನ್ನೂ ಬಿಳಿಯಾಗಬಹುದೆಂಬುದು ನನ್ನ ಕಲ್ಪನೆ. ಈ ಮಹಾ ಐಡಿಯ ತಲೆಗೆ ಹೊಳೆದದ್ದೇ, ಒಂದು ಟಬ್ಬಿಗೆ ನೀರು ತುಂಬಿ, ಸುಮಾರು ಉಜಾಲ ನೀಲಿ ಬೆರೆಸಿ, ಚರ್ಚಿಲ್‌ನನ್ನು ಅದರೊಳಗೆ ಕೂರಿಸಿದೆವು. ಅರ್ಧಗಂಟೆ ಬಿಟ್ಟು ಟಬ್ಬಿನಿಂದ ಹೊರತೆಗೆದರೆ ನೋಡಬೇಕು ಅವನ ಅವಸ್ಥೆ! ಹಾಲುಬಿಳುಪು ಮೈಯಿನ ಚರ್ಚಿಲ್ ನೀಲಿಮಡ್ಡಿಯಾಗಿದ್ದ. ಮುಖ, ತಲೆ ಮಾತ್ರ ಬೆಳ್ಳಗೆ, ದೇಹವೆಲ್ಲ ನೀಲಿ! ನೀಲದೇಹಿ ಚರ್ಚಿಲ್ ಆ ಕ್ಷಣ ಯಾವುದೋ ಬೇರೆ ಗ್ರಹದ ಜೀವಿಯಾಗಿದ್ದ. ಆವತ್ತಿನಿಂದ ಪ್ರತಿದಿನ ವಾಕಿಂಗ್ ಹೋದಾಗೆಲ್ಲ ಎದುರಾಗುವ ಪರಿಚಯಸ್ಥರು 'ಅಯ್ಯೋ ಏನಾಯ್ತು ನಾಯಿಗೆ?! ಅಷ್ಟು ಚನ್ನಾಗಿತ್ತಲ್ಲ!' ಎಂದು ನಾಯಿಗೆ ಏನೋ ಕಾಯಿಲೆಯಾಗಿದೆ ಎನ್ನುವಂತೆ ವಿಚಾರಿಸುತ್ತಿದ್ದರು. ಅಮ್ಮ, ಅಣ್ಣ ಎಲ್ಲರಿಗೂ ನಾವು ಮಾಡಿದ ಘನಕಾರ್ಯವನ್ನು ಹೇಳುವುದು, ಅವರೆಲ್ಲ ನಮ್ಮನ್ನು ವಿಚಿತ್ರವಾಗಿ ನೋಡುವುದು... ಹೀಗೇ ಹಲವು ದಿನಗಳು ನಡೆದವು. ಆನಂತರ ಸುಮಾರು ನಾಲ್ಕೈದು ಬಾರಿ ಸ್ನಾನ ಮಾಡಿಸಿದ ಮೇಲೆಯೇ ಮತ್ತೆ ಚರ್ಚಿಲ್ ಮೂಲಸ್ಥಿತಿಗೆ ಮರಳಿ ಬಂದದ್ದು. ಅಮ್ಮನ ಕೈ ಒದೆ ನನ್ನ ಮತ್ತು ತಮ್ಮನ ಬುದ್ಧಿಗೆ ತಂದ ಹೊಳಪನ್ನು ವಿಶೇಷವಾಗಿ ಹೇಳಬೇಕಿಲ್ಲ.

ಹೊರಕ್ಕೆ ಬಿಟ್ಟಾಗ ಚರ್ಚಿಲ್ ಮೈಗೆ ಒಂದೆರಡು ಚಿಗಟಗಳು ಹತ್ತಿದ್ದವು. ನಾನು ಬಿಡುವಾಗಿ ಕುಳಿತಾಗೆಲ್ಲ ಅದರ ಬಿಳಿಮೈಯಿಂದ ಚಿಗಟಗಳನ್ನು ತಡಕಿತಡಕಿ ತೆಗೆಯುತ್ತಿದ್ದೆ. ಚಿಗಟವನ್ನು ಕಿತ್ತು ಕೈಬೆರಳುಗಳ ಸಂದಿಯಲ್ಲಿ ಇಟ್ಟುಕೊಂಡು ನೋಡೋಣ ಅಂತ ತೆಗೆದರೆ ಅಲ್ಲಿ ಏನೂ ಇರುತ್ತಿರಲಿಲ್ಲ.